ವ್ಯವಹಾರ ಕುಶಲತೆ ಕಲಿಯದೇ ಬಂದವರೊಡನೆ ಚೆನ್ನಾಗಿ ಹರಟುತ್ತಿದ್ದ. ಬೇಸತ್ತು ಶ್ರೀಪತಿರಾಯರು, "ಹೊಲಕ್ಕ ಕಳಸು ಅಂವನ್ನ" ಎಂದು ಬೈದದ್ದಿತ್ತು. ಭಾಗಕ್ಕ ಒತ್ತಾಯಿಸಿದಾಗ ಅಂವ ಹೋದದ್ದು ಹೊಲಗಳಲ್ಲಿ ಸುತ್ತಾಡಲು. ಎಳೆ ಸೀತನಿಗಳನ್ನು ತಿನ್ನಲು... ಕಬ್ಬು ಸವಿಯಲು... ದುಡಿಯಲಲ್ಲ. ಒಟ್ಟಿನಲ್ಲಿ ಮೈಬಗ್ಗಿಸಿ ಕಷ್ಟಪಡುವುದು ಅವನಿಂದ ಸಾಧ್ಯವಿಲ್ಲದ ಮಾತು. ಮನೆಯಲ್ಲಿ ಪೂಜೆ, ಪುನಸ್ಕಾರಗಳನ್ನು ಪೂರೈಸಿ ನಾಮ, ಅಕ್ಷಂತಿಗಳಿಂದ ಸುಶೋಭಿತನಾಗಿ ಮನೆಯೆಲ್ಲ ಓಡಾಡಿಕೊಂಡು ಭೂಷಣಪ್ರಾಯನಾಗಿರುತ್ತಿದ್ದ. ಆ ಮನೆಯಾದರೂ ಎಂಥದು? ದಿವಿನಾದದ್ದು... ವಿಸ್ತಾರವಾದ ಅಂಗಳದ ಹಿಂದೆಯೇ ದೊಡ್ಡ ಜಗುಲಿ. ಪುಟ್ಟ ಬರೆಯುವ ಟೇಬಲ್‌ನ ಹಿಂದೆ ಕುಲಕರ್ಣಿಗಳು ವಿರಾಜಮಾನರಾಗಿರುತ್ತಿದ್ದರು. ಅದಕ್ಕೆ ತಾಗಿಕೊಂಡಿದ್ದ ನೂರು ಜನರು ಕೂಡುವಂಥ ನಡುಮನೆ. ಇದರ ಒಂದು ಬದಿಯಲ್ಲಿ ವಿಶಾಲವಾದ ಅಡಿಗೆಮನೆ. ಇನ್ನೊಂದು ಬದಿಯಲ್ಲಿ ಎರಡು ಕೋಣೆಗಳಿದ್ದಿದ್ದು ನಿಜ. ಆದರೆ, ಅಂದಿನ ದಿನಗಳಲ್ಲಿ ಹಳ್ಳಿಗಳಲ್ಲಿ ದಂಪತಿಗಳು ಕೋಣೆಯಲ್ಲಿ ಮಲಗುವ ಅಭ್ಯಾಸ ಕಡಿಮೆ. ನವದಂಪತಿಗೆ ಮಾತ್ರ ಅವು ಮೀಸಲು. ಮಿಕ್ಕಂತೆ ಎಲ್ಲ ಹೆಂಗಸರೂ ತಮ್ಮ ಮಕ್ಕಳೊಡನೆ ನಡುಮನೆಯಲ್ಲೋ... ಅಡಿಗೆಮನೆಯಲ್ಲೊ ಒಟ್ಟಾಗಿ ಮಲಗುತ್ತಿದ್ದರು. ಇಲ್ಲವಾದರೆ ಹಳ್ಳಿಗಳಲ್ಲಿ "ಖೋಲ್ಯಾಗ ಮಲಕೊಳ್ಳಾವರು" ಎಂದು ನಗೆಗೀಡಾಗುತ್ತಿದ್ದರು. ಒಂದನ್ನು ಶ್ರೀಪತಿರಾಯರು ಉಪಯೋಗಿಸಿದರೆ ಇನ್ನೊಂದು ಆಗಾಗ ಮುಟ್ಟಾದವರ ಕೋಣೆಯೋ... ಬಾಣಂತಿ ಕೋಣೆಯೋ ಆಗುತ್ತಿತ್ತು. ಹಿಂದೆ ಉಗ್ರಾಣದಲ್ಲಿ ಧಾನ್ಯಗಳ ಚೀಲಗಳು, ಹಗೇವಿನಲ್ಲಿ ಕಾಳುಗಳು ತುಂಬಿರುತ್ತಿದ್ದವು.

ನಡುಮನೆಯಲ್ಲೇ ಕಮಲಾ, ವಿಮಲಾರ ವಧುಪರೀಕ್ಷೆ, ಮಾತುಕತೆ, ನಿಶ್ಚಯ... ಮದುವೆ ಇತ್ಯಾದಿಗಳು ಭರದಿಂದ ನಡೆದವು. ಸಂಬಂಧಗಳೂ ಹತ್ತಿರದಲ್ಲೇ ದೊರಕಿದ್ದವು. ಹಿಡಕಲ್‌ನ ಅಗ್ನಿಹೋತ್ರಿಗಳ ಮನೆಗೆ ಕಮಲಾಳನ್ನು... ಗೋಕಾಕದ ಗೋಡಖಿಂಡಿಯವರ ಮನೆಗೆ ವಿಮಲಾಳನ್ನು ಕೊಟ್ಟು ಅಂಗಳಕ್ಕೆಲ್ಲ ಚಪ್ಪರ ಹಾಕಿ... ವಿಜೃಂಭಣೆಯಿಂದ ಮದುವೆ ಮಾಡಿ ಬೀಳ್ಕೊಡಲಾಯಿತು. ಅವರಿಬ್ಬರೂ ತಾಯಿ, ಅಜ್ಜಿಯರು ಹೇಳಿದ ಸಂಪ್ರದಾಯಗಳನ್ನು ಪಾಲಿಸಿ ಮಡಿಹುಡಿ ಮಾಡುತ್ತ ತಲಾ ಮೂರು ಮಕ್ಕಳನ್ನು ಹೆತ್ತು ಸಂಸಾರಚಕ್ರದಲ್ಲಿ ಇನ್ನಿಲ್ಲದಂತೆ ಸುತ್ತಲಾರಂಭಿಸಿದ್ದರು. ಹೆಣ್ಣುಮಕ್ಕಳ ಬಾಣಂತನ ಮುಗಿಸಿ ನಿಶ್ಚಿಂತೆಯಿಂದ ಭಾಗಕ್ಕ ಗಂಡುಮಕ್ಕಳ ಬಗ್ಗೆ ಯೋಚಿಸಿದರು.

"ಥೊಡ್ಡಾಂವಾ ವಾಸಣ್ಣಂದು ಮದ್ಲಾಗ್ಲಿ..." ಎಂದರು ಶ್ರೀಪತಿ. ಅಂತೆಯೇ ಘಟಪ್ರಭಾದ ದೇಸಾಯರ ಮಗಳು ಶಾರದಾ ವಾಸಣ್ಣನ ವಧುವಾಗಿ ಕಾಲಿರಿಸಿದಳು. ಶ್ರೀಪತಿರಾಯರ ಆರೋಗ್ಯ ಹದಗೆಡುತ್ತಿತ್ತು. ಕೃಷ್ಣ ಜವಾಬ್ದಾರಿ ಹೊರಲಿ ಎಂಬಾಸೆ ಅವರಿಗೆ. ಅವನೋ... ಜಾರಿಕೊಳ್ಳುತ್ತಿದ್ದ. ವಾಸು ಆಗೀಗ ತಮ್ಮನಿಗೆ ಪ್ರೀತಿಯಿಂದ, "ಕೆಲಸಾ ಮಾಡದಿದ್ದರ ಹೆಂಗೋ ಕಿಟ್ಟಿ? ಅಪ್ಪನ ಕೈಯಾಗ ಎಲ್ಲಾ ಕಲಿ" ಎಂದು ಕೂರಿಸಿಕೊಂಡು ಬುದ್ಧಿ ಹೇಳುತ್ತಿದ್ದುದಿತ್ತು. ಜವಾಬ್ದಾರಿ ಬರಲೆಂದು ಕೃಷ್ಣನಿಗೂ ಬೆಲ್ಲದ ಬಾಗೇವಾಡಿಯ ಹುಡುಗಿ ಪದ್ಮಾಳೊಂದಿಗೆ ಮದುವೆ ಮಾಡಿದರು. ಶಾರದಾ, ಪದ್ಮಾ ಅಕ್ಕ... ತಂಗಿಯರಂತೆ ಅನ್ಯೋನ್ಯವಾಗಿದ್ದರು. ವಿಠ್ಠಲನಿಗೂ ಬಿ.ಕಾಂ. ಮುಗಿಸಿದ ನಂತರ ಬ್ಯಾಂಕಿನಲ್ಲಿ ಕೆಲಸವಾಗಿತ್ತು. ಶಾರದಾ ಮೊದಲು ಗರ್ಭವತಿಯಾದಳು. ಮನೆಯಲ್ಲೆಲ್ಲ ಸಂಭ್ರಮ ತುಂಬಿ ತುಳುಕಾಡಿತು. ಭಾಗಕ್ಕ ಸಂತಸದಿಂದ ಸೀಮಂತ ಮಾಡಿ ಹೆರಿಗೆಗಾಗಿ ತವರಿಗೆ ಕಳಿಸಿದರು. ಆದರೆ, ಬಂದದ್ದು ಆಘಾತದ ಸುದ್ದಿ. ತಾಯಿ, ಮಗು ಇಬ್ಬರೂ ಉಳಿಯಲಿಲ್ಲ. ಇಡೀ ಮನೆ ಶೋಕಸಾಗರದಲ್ಲಿ ಮುಳುಗಿ ಹೋಯಿತು. ವಾಸಣ್ಣ ದುಃಖ ನುಂಗಿ ಮೌನವಾಗಿಬಿಟ್ಟ.

ದುಃಖಕರ ಘಟನೆ ಅನೇಕ ವರ್ಷಗಳವರೆಗೆ ತನ್ನ ಛಾಯೆಯನ್ನು ಉಳಿಸಿತು. ವಾಸಣ್ಣನನ್ನು ನೋಡಲಾಗುತ್ತಿರಲಿಲ್ಲ. ಭಾಗಕ್ಕ ಮರುಮದುವೆಯ ಮಾತೆತ್ತಿದಾಗ ಖಡಾಖಂಡಿತವಾಗಿ ನಿರಾಕರಿಸಿದನವ. ಇತ್ತೀಚೆಗೆ ಕೃಷ್ಣನ ಹೊಣೆಗೇಡಿತನಕ್ಕೆ ಕೋಪಾವಿಷ್ಟನಾಗಿ ಕೂಗಾಡುವುದೂ